

ಈಗಲೂ ಕರುಣೆ, ಅನುಕಂಪ ಮತ್ತು ಪ್ರೀತಿ. ಆ ಭಯಪುರಾಣ ನೆನಪಿಸಿಕೊಳ್ಳುವದಾದರೆ, ನಾನಾಗ ಬಿ.ಎ. ಓದುತ್ತಿದ್ದೆ. ಲಕ್ಷ್ಮೇಶ್ವರದಿಂದ ಅರವತ್ತು ಕಿಲೋ ಮೀಟರ್ ದೂರದ ಹುಬ್ಬಳ್ಳಿ ನಮಗೆಲ್ಲಾ ಅದ್ಭುತ ಮತ್ತು ಮಾಂತ್ರಿಕ ಲೋಕವೆನಿಸುತ್ತಿತ್ತು. ಆಗ ಅವ್ವನೊಂದಿಗೆ ಹುಬ್ಬಳ್ಳಿಗೆ ಹೋದಾಗ ಇಷ್ಟಪಟ್ಟು ದುರ್ಗದ ಬೈಲಿನ ಒಂದು ಅಂಗಡಿಯಲ್ಲಿ ಹೀಲ್ಡ್ ಚಪ್ಪಲಿಯನ್ನು ಕೊಡಸಿಕೊಂಡೆ. ಅವುಗಳನ್ನು ಯಾವಾಗ ಹಾಕಿ ಕಾಲೇಜಿಗೆ ಸ್ಟೈಲ್ ಮಾಡಿಕೊಂಡು ಹೋದೇನೋ, ಎಲ್ಲರಿಗೂ ಯಾವಾಗ ತೋರಿಸೇನೋ... ಎನ್ನುವ ಹಂಬಲ ಅದೆಷ್ಟು ಹೆಚ್ಚುತ್ತಾ ಹೋಯಿತೆಂದರೆ ಊರು ಮುಟ್ಟುವವರೆಗೂ ನನ್ನ ತೊಡೆ ಮೇಲಿರುವ ಆ ಬಾಕ್ಸ್ ನೋಡಿದ್ದೇ ನೋಡಿದ್ದು. ನಾಳೆ ಕಾಲೇಜಿಗೆ ಸ್ಕರ್ಟ್ ಹಾಕಲಾ... ಬ್ಯಾಡಾ, ಚೂಡಿ ಹಾಕಲಾ... ಉಹುಂ, ಲಂಗಾ ತೊಡಲಾ... ಹೀಗೆ ಚಪ್ಪಲಿ ಮೆಟ್ಟಿದ ಕನಸ ತೇರಿಗೆ ಸ್ಕರ್ಟ್, ಲಂಗಾ, ಚೂಡಿದಾರ ತೊಡಿಸಿ ತೇರನು ಎಳದದ್ದೇ ಎಳದದ್ದು. ಪರೀಕ್ಷಾ ಸಮಯವಾದ್ದರಿಂದ ಓದಲೆಂದು ಮನೆಯಲ್ಲಿದ್ದೆವು. ಹಂಗೇನಾದರೂ ಗ್ರಂಥಾಲಯದ ಪುಸ್ತಕ ಬದಲಿಸುವುದಿದ್ದರೆ, ಕಾಲೇಜಿಗೆ ಹೋಗುತ್ತಿದ್ದೆವು. ಮರುದಿನ ಲೈಬ್ರರಿಗೆ ಪುಸ್ತಕ ಬದಲಿಸುವ ನೆಪ ಹುಡುಕಿ ಗೆಳತಿಯೊಂದಿಗೆ ಕ್ಯಾಟ್ವಾಕ್ ನಡಿಗೆಯಲ್ಲಿ ಚೂಡಿ ಧರಿಸಿ ಹೊರಟೆ. ಕಾಲೇಜಿನ ಹಿಂಬಾಗಕ್ಕೆ ಎರಡು ನೂರು ಮೀಟರ್ ನಡೆದು ಹೋದರೆ, ಲೈಬ್ರರಿ ಇತ್ತು. ಮಸಾರಿ ಕೆಂಪು ಮಣ್ಣಿನ ತುಸು ಅಂಕು ಡೊಂಕಾದ ದಾರಿಯ ಎರಡೂ ಬದಿಯಲ್ಲಿ ನೀಲಗಿರಿ, ಹೊಂಗೆಯ ಮರಗಳು. ಮರಗಳ ನಡುವೆ ಅಲ್ಲಲ್ಲಿ ಹಾಸುಕಲ್ಲಿನ ಕಟ್ಟೆಗಳು. ಕಟ್ಟೆಗಳ ಮೇಲೆ ಒಂದು ಬದಿ ಹುಡಗಿಯರು. ಮತ್ತೊಂದು ಬದಿ ಹುಡುಗರು. ಹುಡುಗಹುಡುಗಿಯರು ಕೂಡಿ ಇದ್ದದ್ದು ತೀರ ಅಪರೂಪ. ನಾನು, ನನ್ನ ಚಪ್ಪಲಿ ಮತ್ತು ಅದನ್ನು ಯಾರಾದರೂ ನೋಡುತ್ತಿರುವರೋ, ಮತ್ತೆ ನಾ ಸಿನಿಮಾದ ಯಾವ ನಟಿಯಂತೆ ನಡೆಯುತ್ತಿರುವೆ ಎಂಬ ಯೋಚನೆಯಲ್ಲಿಯೇ ನಡೆದೆ. ಗೆಳತಿ ಏನೇನೋ ಹೇಳುತ್ತಲಿದ್ದಳು. ಅವಳ ಮಾತುಗಳೆಲ್ಲ ಕಿವಿಗಪ್ಪಳಿಸಿ ಮರಳುತ್ತಿದ್ದವು. ಇನ್ನೇನು ಮೂರು ನಾಲ್ಕು ಮೀಟರ್ ದೂರದಲ್ಲಿ ಗ್ರಂಥಾಲಯದ ಬಾಗಿಲು. ಹೀಲ್ಡ್ ಚಪ್ಪಲಿಗಳಾಗಿದ್ದರಿಂದ ಬೀಳುವ ಭಯವನ್ನು ಹತ್ತಿಕ್ಕಿ ಹೆಜ್ಜೆ ಮುಂದಿರಿಸುವುದರಲ್ಲೆ ಏನಾಯಿತೆಂದು ಗೊತ್ತೇ